

ಐರಾವತೀಶ್ವರ ದ್ರಾವಿಡ ಶೈಲಿಯ ಹಿಂದೂ ದೇಗುಲ. ಎರಡನೇ ರಾಜೇಂದ್ರ ಚೋಳನು 12ನೇ ಶತಮಾನದಲ್ಲಿ ಇದನ್ನು ಕಟ್ಟಿಸಿದ ಎನ್ನುತ್ತದೆ ಇತಿಹಾಸ.

ಯುನೆಸ್ಕೊದ ವಿಶ್ವ ಸಾಂಸ್ಕೃತಿಕ ತಾಣಗಳ ಪಟ್ಟಿಯಲ್ಲಿ, ಚೋಳರ ದೇವಾಲಯಗಳಾದ ತಂಜಾವೂರಿನ ಬೃಹದೀಶ್ವರ ದೇವಾಲಯ ಹಾಗೂ ಗಂಗೈಕೊಂಡಂ ಚೋಳಪುರಂನ ಗಂಗೈಕೊಂಡ ಚೋಳೇಶ್ವರ ದೇಗುಲಗಳೊಂದಿಗೆ ಧರಸುರಂನ ಐರಾವತೀಶ್ವರ ದೇಗುಲವೂ 2004ರಲ್ಲಿ ಸೇರ್ಪಡೆಯಾಗಿದೆ.

ದೇಗುಲಾಭಿಮುಖವಾಗಿರುವ ನಂದಿಯನ್ನು ದರ್ಶನ ಮಾಡಿ ಒಳಹೊಕ್ಕರೆ, ದೇಗುಲದ ಪೂರ್ವದಿಕ್ಕಿನಲ್ಲಿರುವ ಅಪರೂಪದ ಕೆತ್ತನೆಗಳು ಸಹೃದಯರ ಗಮನಸೆಳೆಯುತ್ತವೆ. ಅವುಗಳಲ್ಲಿ 'ಬಲಿಪೀಠ'ವೂ ಒಂದು. ಇಲ್ಲಿ ಗಣೇಶನ ವಿಗ್ರಹವನ್ನು ನೋಡಬಹುದು.

ದಕ್ಷಿಣ–ಪಶ್ಚಿಮಾಭಿಮುಖವಾಗಿ ನಿಂತಾಗ ಯಮನ ವಿಗ್ರಹವನ್ನು ಹೊಂದಿದ ಇನ್ನೊಂದು ಮಂಟಪವನ್ನು ಕಾಣಬಹುದು. ಇದರ ಪಕ್ಕದಲ್ಲೇ ಸಪ್ತಮಾತೆಯರ ಶಿಲ್ಪಗಳಿವೆ.

ಐರಾವತೀಶ್ವರ ದೇಗುಲವು ಶಿಲ್ಪಕಲೆಗಳ ಸಂಪುಟವೆಂದರೆ ತಪ್ಪಾಗಲಾರದು. ದೇಗುಲದ ಗೋಪುರವು 80 ಅಡಿ ಎತ್ತರದ್ದಾಗಿದೆ. ಮುಖಮಂಟಪದ ದಕ್ಷಿಣ ದಿಕ್ಕಿನಿಂದ ವೀಕ್ಷಿಸಿದಾಗ, ಬೃಹತ್ ಚಕ್ರವುಳ್ಳ ದೊಡ್ಡ ರಥವನ್ನು ಕುದುರೆಗಳು ಎಳೆಯುತ್ತಿರುವ ಶಿಲ್ಪಕಲಾಕೃತಿಯು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಆ ಚಕ್ರವನ್ನು ಆರು ಕಲ್ಲುಗಳ ಜೋಡಣೆಯಿಂದ ನಿರ್ಮಿಸಲಾಗಿದ್ದು, ಅದು ಶಿಲ್ಪಿಯ ಕಲಾನೈಪುಣ್ಯತೆಗೆ ಕೈಗನ್ನಡಿಯಂತಿದೆ.

ಐರಾವತೀಶ್ವರಕ್ಕೆ ಸಂಬಂಧಿಸಿದ ಸ್ಥಳನಾಮ ಸ್ವಾರಸ್ಯಕರವಾಗಿದೆ. ದೇವಗಜ ಐರಾವತದಿಂದ ಪೂಜೆಗೊಳಗಾದುದರಿಂದ ಶಿವನಿಗೆ ಐರಾವತೀಶ್ವರನೆಂಬ ಹೆಸರು ಬಂತೆಂಬ ಪ್ರತೀತಿ ಇದೆ. ಋಷಿಗಳ ಶಾಪದಿಂದಾಗಿ ಅತಿಯಾದ ದಾಹದಿಂದ ಬಳಲುತ್ತಿದ್ದ ಯಮನು ಇಲ್ಲಿನ ಪವಿತ್ರ ತೀರ್ಥದಲ್ಲಿ ಮಿಂದು, ಶಾಪಮುಕ್ತನಾದನೆಂದೂ ಹಾಗಾಗಿ ಅದು 'ಯಮತೀರ್ಥ'ವೆಂದು ಪ್ರಸಿದ್ಧಿ ಹೊಂದಿತು ಎಂದು ಪುರಾಣವು ತಿಳಿಸುತ್ತದೆ.

ಹುಲ್ಲುಹಾಸಿನ ನಡುವೆ ಅಲ್ಲಲ್ಲಿ ಬೃಹದಾಕಾರವಾಗಿ ಬೆಳೆದು ನಿಂತ ಉದ್ಯಾನದಲ್ಲಿನ ಮರಗಳು, ನಮ್ಮ ಪ್ರವಾಸದ ಎಲ್ಲಾ ಆಯಾಸವನ್ನು ನೀಗಿಸುತ್ತದೆ. ತಂಪು ಗಾಳಿಯ ಪ್ರಶಾಂತ ಪರಿಸರ ಮನಸ್ಸಿಗೆ ಮುದ ನೀಡುವುದರಲ್ಲಿ ಸಂಶಯವಿಲ್ಲ. ಪರಿಸರ ಮಾಲಿನ್ಯವೆಂಬ ಪೆಡಂಭೂತವು ಇಲ್ಲಿಗೆ ಲಗ್ಗೆಯಿಟ್ಟಿಲ್ಲ ಎಂಬುದು ತೃಪ್ತಿಕರ.



**ಹೋಗುವುದು ಹೇಗೆ:** ಬೆಂಗಳೂರಿನಿಂದ ತಂಜಾವೂರಿಗೆ 400 ಕಿ.ಮೀ. ದೂರ. ಅಲ್ಲಿಂದ ಧರಸುರಂ 34 ಕಿ.ಮೀ. ದೂರದಲ್ಲಿದೆ. ಐತಿಹಾಸಿಕ ತಂಜಾವೂರು ಬೃಹದೀಶ್ವರ ದೇಗುಲವನ್ನು ವೀಕ್ಷಿಸಿ, ಧರಸುರಂ ದರ್ಶನ ಮಾಡಬಹುದು.

**ಸನಿಹದ ಪ್ರೇಕ್ಷಣೀಯ ಸ್ಥಳಗಳು:** ಗಂಗೈಕೊಂಡಂ ಚೋಳೇಶ್ವರಂ, ಕುಂಭಕೋಣಂನ ಪ್ರಸಿದ್ಧ ಆದಿ ಕುಂಭೇಶ್ವರ ದೇಗುಲವು ಧರಸುರಂನಿಂದ ಕೇವಲ 3 ಕಿ.ಮೀ. ದೂರದಲ್ಲಿದೆ.

